# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 1045/2020

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : | ಹೆಚ್ ಜಿ ಲಿಂಗರಾಜು ಚಾಸಾಃ **1** ಫ್ರಾಸಾಃ **1** |
| **ತಂದೆಯ ಹೆಸರು** | : | ಎಸ್ ಹಾಲಸಿದ್ದಪ್ಪ |
| **ವಯಸ್ಸು** | : | **25** ವರ್ಷ |
| **ವೃತ್ತಿ** | : | ವಿದ್ಯಾಭ್ಯಾಸ |
| **ವಾಸಸ್ಥಳ** | : | ಹಾಲಿವಾಣ |

ದಿನಾಂಕಃ **20-12-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

1 ನೇ ಆರೋಪಿ ಗೊತ್ತಿಲ್ಲ. ಮೃತ ಚಂದ್ರಶೇಖರ ನನ್ನ ಮಾವ. ನನಗೆ ಮತ್ತು ನನ್ನ ಮಾವ ಚಂದ್ರಶೇಖರರವರಿಗೆ ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಅಪಘಾತವಾಗಿರುತ್ತದೆ. ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ದಿಃ 01-03-2020 ರಂದು ಬೆಳಗ್ಗೆ ನನ್ನ ಮಾವ ಎಂ ಚಂದ್ರಶೇಖರಪ್ಪರವರು ನನ್ನ ತಂದೆಗೆ ಪೋನ್ ಮಾಡಿ ತಾನು ಕತ್ತಲಗೆರೆ ಗ್ರಾಮದಿಂದ ಹಿರೇಹಾಲಿವಾಣ ಗ್ರಾಮಕ್ಕೆ ಬರಲು ಕುಂದೂರುವರೆಗೆ ಬಸ್ಸಿನಲ್ಲಿ ಬರುತ್ತೇನೆ ಎಂದು ಮತ್ತು ಕುಂದೂರಿಗೆ ಬೈಕನ್ನು ಕಳುಹಿಸಿ ತಾನು ಕುಂದೂರಿನಿಂದ ಬೈಕಿನಲ್ಲಿ ಹಿರೇಹಾಲಿವಾಣ ಗ್ರಾಮಕ್ಕೆ ಬರುತ್ತೇನೆ ಎಂದು ಹೇಳಿದ್ದರಿಂದ ನನ್ನ ತಂದೆ ನನಗೆ ಬೆಳಗ್ಗೆ 10-30 ಗಂಟೆ ಸಮಯದಲ್ಲಿ ಕೆಎ-27/ಯು-7274 ಮೋಟಾರ್ ಸೈಕಲ್ ಅನ್ನು ತೆಗೆದುಕೊಂಡು ಕುಂದೂರಿಗೆ ಹೋಗಿ ನನ್ನ ಮಾವನನ್ನು ಕರೆದುಕೊಂಡು ಬರಲು ತಿಳಿಸಿದ ಮೇರೆಗೆ ನಾನು ಹಿರೇಹಾಲಿವಾಣ ಗ್ರಾಮದಿಂದ ಬೈಕಿನಲ್ಲಿ ಕುಂದೂರಿಗೆ ಹೋಗಿದ್ದು ಅಲ್ಲಿನಿಂದ ನನ್ನ ಮಾವ ಚಂದ್ರಶೇಖರರವರು ಬೈಕನ್ನು ಚಾಲನೆ ಮಾಡುತ್ತಿದ್ದು ನಾನು ಹಿಂಬದಿಯಲ್ಲಿ ಕುಳಿತುಕೊಂಡು ಹಿರೇಹಾಲಿವಾಣ ಗ್ರಾಮಕ್ಕೆ ಬರುತ್ತಿದ್ದು ಬೆಳಗ್ಗೆ ಸುಮಾರು 11-00 ಗಂಟೆ ಸಮಯದಲ್ಲಿ ಯಕ್ಕನಹಳ್ಳಿ ಗ್ರಾಮದ ಹತ್ತಿರ ಮುರುಗೇಶಪ್ಪ ಮತ್ತು ಗಿರಿಯಪ್ಪರ ರಂಗಪ್ಪ ಎಂಬುವವರ ಭತ್ತದ ಗದ್ದೆಯ ಮದ್ಯೇ ಹಾದುಹೋಗಿರುವ ಯಕ್ಕನಹಳ್ಳಿ ಕಡೆಗೆ ಒಂದು ಟ್ರಾಕ್ಟರ್ ಇಂಜಿನ್ 2 ಸಗಣಿ ಗೊಬ್ಬರ ತುಂಬಿದ ಟ್ರಾಕ್ಟರ್ ಟ್ರೇಲರ್ ಗಳನ್ನು ಜೋಡಿಸಿಕೊಂಡು ಚಾಲಕನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದರಿಂದ ಸದರಿ ಟ್ರಾಕ್ಟರ್ ರಸ್ತೆಯ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ್ದರಿಂದ ಸದರಿ ಮೋಟಾರ್ ಸೈಕಲ್ ಸಮೇತ ನಾನು ಮತ್ತು ನನ್ನ ಮಾವ ಕೆಳಗೆ ಬಿದಿದ್ದು ಮತ್ತು ಮೋಟಾರ್ ಸೈಕಲ್ ಜಕಂ ಗೊಂಡಿದ್ದು ನನಗೆ ಎದೆಯ ಎಡಭಾಗ, ಬಲಗೈ, ಎರಡು ಕಾಲುಗಳು ಮತ್ತು ಇತರ ಕಡೆ ಪೆಟ್ಟು ಬಿದ್ದು ಗಾಯಗಳಾಗಿದ್ದು ಮತ್ತು ಬೈಕ್ ಚಾಲನೆ ಮಾಡುತ್ತಿದ್ದ ನನ್ನ ಮಾವ ಚಂದ್ರಶೇಖರನಿಗೆ ಎಡಗೈ, ತಲೆಯ ಹಿಂಭಾಗ ಮತ್ತು ಇತರ ಕಡೆ ಪೆಟ್ಟು ಬಿದ್ದು ರಕ್ತಗಾಯಗಳಿದ್ದು ಮತ್ತು ಬಾಯಲ್ಲಿ ರಕ್ತ ಬಂದು ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆ ಎಂದು ಮತ್ತು ಸದರಿ ವಿಚಾರವನ್ನು ನಾನು ನನ್ನ ತಂದಗೆಗೆ ಪೋನ್ ಮಾಡಿ ತಿಳಿಸಿ ಮತ್ತು ಮೋಟಾರ್ ಸೈಕಲ್ ಗೆ ಅಪಘಾತ ಪಡಿಸಿದ ಟ್ರಾಕ್ಟರ್ ಇಂಜಿನ್ ನಂ.ಕೆಎ-17/ಟಿಬಿ-9599 ಆಗಿದ್ದು ಮತ್ತು ಎರಡು ಟ್ರೇಲರ್ ಗಳಿಗೆ ಯಾವುದೇ ನಂಬರ್ ಗಳು ಇರಲಿಲ್ಲ ನಂತರ ಅಪಘಾತವನ್ನು ನೋಡಿದ ಚಾಸಾ-2 ರಿಂದ 4 ರವರು ನಮ್ಮನ್ನು ಉಪಚರಿಸಿ ಆಂಬುಲೆನ್ಸ್ ಗೆ ಪೋನ್ ಮಾಡಿದ್ದು ನಂತರ ನಮ್ಮ ತಂದೆಯು ಆಂಬುಲೆನ್ಸ್ ನಲ್ಲಿ ಬಂದು ನಮ್ಮ ಮಾವನ ಮೃತ ದೇಹವನ್ನು ಒಂದು ವಾಹನದಲ್ಲಿ ಮಲೇಬೆನ್ನೂರು ಆಸ್ಪತ್ರೆಯ ಶವಗಾರಕ್ಕೆ ಕರೆದುಕೊಂಡು ಹೋಗಿದ್ದು ಮತ್ತು ನನಗೆ ಅಲ್ಲಿ ಚಿಕಿತ್ಸೆಯನ್ನು ಕೊಡಿಸಿ, ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಅಲ್ಲಿನಿಂದ ರಾಮಕೃಷ್ಣ ನರ್ಸಿಂಗ್ ಹೋಂ ಗೆ ಕರೆದುಕೊಂಡು ಹೋಗಿ

ದಾಖಲಿಸಿರುತ್ತಾರೆ ಎಂದು ಮತ್ತು ಟ್ರ್ಯಾಕ್ಟರ್ ಅನ್ನು ಚಾಲನೆ ಮಾಡಿದ್ದು 1 ನೇ ಆರೋಪಿ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-2 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.